ನಿಜವಾಗಿಯೂ ಸೈತಾನನ ಮರಿಯೇ ಸೈ! ನನ್ನ ಮಂಡಿ ನೋಡಿಲ್ಲಿ. ಹೇಗೆ ಒದೆಯುತ್ತಾನೆ ಗೊತ್ತಾ?!' ಮಂಡಿಯನ್ನು ನೇವರಿಸುತ್ತಾ ಅಳು ಮುಖದಿಂದ ಹೇಳಿದ ಬಿಲ್ಲ್.

ಮರಿ ಪಟೇಲ ಹುಡುಗ, ಕಿಂಚಿತ್ತೂ ಭಯ, ಆತಂಕಗಳಿಲ್ಲದೆ ನೆಮ್ಮದಿಯಾಗಿದ್ದಂತೆ ಕಂಡಿತು. ಊರಿನಲ್ಲಿ ಕಟ್ಟಿ ಹಾಕಿದಂತಿದ್ದ ಅವನು ಕೊರಳ ಹಗ್ಗ ತುಂಡರಿಸಿದ್ದ ತುಡುಗು ಕರುವಿನಂತಾಗಿದ್ದ. ತಾನೊಬ್ಬ ಒತ್ತೆಯಾಳು ಎಂಬುದು ಅವನಿಗೆ ಇನ್ನೂ ಗೊತ್ತಾಗಿರಲಿಲ್ಲವೋ, ಇಲ್ಲ ಅವನು ತಲೆ ಕೆಡಿಸಿಕೊಂಡಿರಲಿಲ್ಲವೋ ಗೊತ್ತಿಲ್ಲ! ನಾನು ಮಗದೊಂದು ಕಲ್ಲಿನ ಮೇಲೆ ಅಂಡನ್ನೂರುವ ಮೊದಲೇ ಅವನು ನನಗೊಂದು ಅಡ್ಡ ಹೆಸರನ್ನಿಟ್ಟ: ಗೂಢಾಚಾರ ಸ್ನೇಕ್—ಐ! ಅವನ ಸೈನಿಕರು ಯುದ್ಧರಂಗದಿಂದ ವಾಪಸ್ಸಾಗುತ್ತಿದ್ದಂತೆ ಬೆಳಗಿನ ಜಾವ ನನ್ನನ್ನೂ ಕಂಬಕ್ಕೆ ಕಟ್ಟಿ ಸುಡುವುದಾಗಿ ಅವನು ಎಚ್ಚರಿಸಿದ.

***ಬೆಳ್ಳಂಬೆಳಗ್ಗೆ ಬಿಲ್ಲನ ಆಕ್ರಂದನ ಕೇಳಿ ನಾನು ಹಠಾತ್ತನೆ ಎದ್ದು ಕುಳಿತೆ. ರೆಡ್ ಇಂಡಿಯನ್ ಯಜಮಾನ ಬಿಲ್ಲನ ಎದೆಯನ್ನೇರಿ ಕುಳಿತು ಕೊಂಡಿರುವುದು ಕಾಣಿಸಿತು. ಅವನ ಎಡಗೈಯ ಮುಷ್ಟಿಯಲ್ಲಿ ಬಿಲ್ಲನ ಒಂದು ಹಿಡಿ ತಲೆಗೂದಲಿತ್ತು! ಬಲಗೈಯಲ್ಲಿ ನಾವು ಬೇಕನ್ ಕತ್ತರಿಸುವ ಚೂರಿಯಿತ್ತು! ಹಿಂದಿನ ಸಂಜೆ ತೀರ್ಮಾನಿಸಿದಂತೆ ಅವನು ಬಿಲ್ಲನ ತಲೆಯನ್ನು ಕತ್ತರಿಸಲು ಹೊರಟಿದ್ದ!...***

ನಾವು ಊಟಕ್ಕೆ ಕುಳಿತೆವು. ಬಾಯಲ್ಲಿ ಬ್ರೆಡ್, ಬೇಕನ್ ಮತ್ತು ಆಲೂಗೆಡ್ಡೆ ತುಂಬಿಸಿಕೊಂಡೇ ಅವನು ಮಾತನಾಡಲಾರಂಭಿಸಿದ: 'ನನಗೆ ಈ ಜಾಗ ತುಂಬಾ ಇಷ್ಟವಾಯ್ತು! ನಾನು ಕಾಡಿನಲ್ಲಿ ಇದೇ ಮೊದಲ ಬಾರಿ ಕ್ಯಾಂಪ್ ಮಾಡುತ್ತಿರುವುದು... ಕಳೆದ ವರ್ಷ, ನನ್ನ ಒಂಬತ್ತನೇ ವಯಸ್ಸಿನಲ್ಲಿ ನಾನೊಂದು ಮುಂಗುಸಿಯನ್ನು ಸಾಕಿದ್ದೆ... ಶಾಲೆಗೆ ಹೋಗುವುದು ನನಗೆ ಸ್ವಲ್ಪವೂ ಹಿಡಿಸುವುದಿಲ್ಲ.' ತುತ್ತನ್ನು ನುಂಗುತ್ತಾ ಅವನು ಮುಗುಳ್ನಕ್ಕ. 'ನಿಮಗೆ ಗೊತ್ತೆ? ಮರಿ ಮಾಡಲು ಇಟ್ಟಿದ್ದ ಜಿಮ್ಮಿಯ ಹೇಂಟೆಯ ಹದಿನಾರು ಮೊಟ್ಟೆಗಳನ್ನು ಇಲಿ ನುಂಗಿಹಾಕಿತ್ತು!... ಇಲ್ಲಿ ಸುತ್ತಮುತ್ತ ನಿಜವಾಗಿಯೂ ರೆಡ್ ಇಂಡಿಯನ್ಸ್‌ಗಳಿದ್ದಾರೆಯೇ?... ನನಗೆ ಮೊತ್ತೊಂದಿಷ್ಟು ಸಾರು ಬೇಕು... ಅಂದ್ಹಾಗೆ ಈ ಮರಗಳು ಅಲ್ಲಾಡುವಾಗ ಗಾಳಿ ಬೀಸುತ್ತದೆಯೇ? ನಮ್ಮ ಮನೇಲಿ ಐದು ನಾಯಿ ಮರಿಗಳಿದ್ದವು, ಹ್ಯಾಂಕ್ ನಿನ್ನ ಮೂಗೇಕೆ ಅಷ್ಟೊಂದು ಕೆಂಪು? ನನ್ನಪ್ಪನತ್ರ ತುಂಬಾ ಹಣವುಂಟು, ಈ ನಕ್ಷತ್ರಗಳು ಬಿಸಿಯಾಗಿರುತ್ತವಾ? ಮೊನ್ನೆ ಶನಿವಾರ ನಾನು ಎಡ್ಡಿಗೆ ಸರಿಯಾಗಿ ಹೊಡೆದೆ! ನನಗೆ ಹುಡುಗೀರ್ನ ಕಂಡ್ರೆ ಆಗೋದಿಲ್ಲ, ದಾರ ಇಲ್ಲದಿದ್ರೆ ಕಪ್ಪೆಗಳನ್ನ ಹಿಡಿಯೋದು ಕಷ್ಟ, ಕಿತ್ತಳೆ ಹಣ್ಣುಗಳೇಕೆ ಗೋಲಾಗಿರುತ್ತವೆ? ಇಲ್ಲಿ ಗುಹೆಯೊಳಗೆ ಮಲಗಲು ನಿಮ್ಮಲ್ಲಿ ಹಾಸಿಗೆಗಳುಂಟೆ? ನಿಮಗೆ ಅಮೋಸ ಗೊತ್ತೆ? ಅವನಿಗೆ ಆರು ಕಾಲ್ಬೆರಳುಗಳು! ಗಿಣಿಗಳು ಮಾತಾಡಿದಂತೆ ಕಾಗೆಗಳೇಕೆ ಮಾತನಾಡುವುದಿಲ್ಲ?...